## ಧನಕನಕ ಗಣಪನ ವಿಶ್ವರೂಪ

ಗಣೇಶನನ್ನು ಚಿತ್ರಿಸುವುದಾಗಲಿ, ಮೂರ್ತಿ ರಚಿಸುವುದಾಗಲಿ ಕಲಾವಿದರಿಗೆಲ್ಲಾ ಭಕ್ತಿಭಾವದ ಜೊತೆಗೆ ಸೃಜನಾತ್ಮಕ ಅಭಿವ್ಯಕ್ತಿಯೂ ಆಗಿರುತ್ತದೆ. ಉಡುಪಿಯ ಸ್ಯಾಂಡ್ ಆರ್ಟ್ ತಂಡದ ಕಲಾವಿದರಾದ ಶ್ರೀನಾಥ್, ವೆಂಕಿ ಮತ್ತು ರವಿ ಅವರು ಸೇರಿ 21 ದೇಶಗಳ ಕೃತಕ ಕರೆನ್ಸಿ ನೋಟುಗಳನ್ನು ಬಳಸಿ 12 ಅಡಿ ಎತ್ತರದ ಗಣೇಶನ ಕಲಾಕೃತಿಯನ್ನು ರಚಿಸಿದ್ದು ವಿಶಿಷ್ಟವಾಗಿದೆ. ಇದರಲ್ಲಿ ಭಾರತದ 10ರಿಂದ 2,000ವರೆಗಿನ ಸಂಖ್ಯೆಯ ನೋಟುಗಳ ಯಥಾ ಪ್ರತಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಬಳಸಲಾಗಿತ್ತು. ಉಳಿದಂತೆ ಶ್ರೀಲಂಕಾ, ಬಾಂಗ್ಲಾದೇಶ, ಚೀನಾ, ಭೂತಾನ್, ಅಫ್ಘಾನಿಸ್ಥಾನ್, ಬೆಹರೇನ್, ಯುಎಇ, ಅಮೆರಿಕ, ಇಸ್ರೇಲ್ ಮುಂತಾದ 21ದೇಶಗಳ ಕರೆನ್ಸಿ ನೋಟುಗಳನ್ನು ಗಣೇಶನ ಆಕಾರಕ್ಕೆ ಅಂಟಿಸಿ ವಿಶ್ವವ್ಯಾಪಿ ಪರಿಕಲ್ಪನೆಗೆ ಅರ್ಥ ಕೊಡಲಾಯಿತು. ಚೌತಿ ಹಬ್ಬದ ಸಲುವಾಗಿ ಪ್ರತಿವರ್ಷ ಈ ಕಲಾವಿದರು ಪೇಪರ್ ಕಪ್, ಹ್ಯಾಂಡ್‌ಮೇಡ್ ಕಾಗದ ಬಾಕ್ಸ್, ಬಿಸ್ಕತ್, ಧಾನ್ಯಗಳಿಂದ ಗಣೇಶನ ಸೃಜನಾತ್ಮಕ ಕಲಾಕೃತಿಗಳನ್ನು ರಚಿಸಿ ಸಾರ್ವಜನಿಕರ ಮೆಚ್ಚುಗೆ ಪಡೆದಿದ್ದರು.

–ಜೀವನ್ ಶೆಟ್ಟಿ, ಉಡುಪಿ





## ರಂಗನಾಥನ ಪಾದುಕೆ

ಈ ಚಿತ್ರದಲ್ಲಿ ಕಾಣುತ್ತಿರುವುದು ಬಿಳಿಗಿರಿರಂಗನ ಬೆಟ್ಟದಲ್ಲಿರುವ ಬಿಳಿಗಿರಿರಂಗನಾಥನ ಪಾದುಕೆ ಎಂದು ಅಲ್ಲಿಯ ಕಾಡು ಜನರಾದ ಸೋಲಿಗರು ಹೇಳುತ್ತಾರೆ. ಪ್ರತಿವರ್ಷವೂ ಹೊಸ ಪಾದುಕೆಗಳನ್ನು ತಯಾರಿಸಿ ಬಿಳಿಗಿರಿರಂಗನಾಥ ದೇಗುಲದ ಆವರಣದಲ್ಲಿ ಇಡುವುದು ಇಲ್ಲಿನ ವಾಡಿಕೆ. ರಾತ್ರಿ ವೇಳೆ ರಂಗನಾಥ ಸ್ವಾಮಿ ಈ ಪಾದುಕೆಗಳನ್ನು ಮೆಟ್ಟಿ ಕಾಡಿನಲ್ಲೆಲ್ಲಾ ಓಡಾಡುತ್ತಾರೆ ಎನ್ನುವುದು ಅವರ ನಂಬಿಕೆ. ಪಾದುಕೆಗಳು ಸಹ ಸವೆಯುವುದು ಈ ನಂಬಿಕೆ ನಿಜ ಎಂಬುದಕ್ಕೆ ಪುಷ್ಟೀಕರಿಸುತ್ತದೆ. ಇಂದಿಗೂ ಸಹ ಈ ಪಾದುಕೆಗಳನ್ನು ಬಿಳಿಗಿರಿರಂಗನಬೆಟ್ಟದ ದೇವಾಲಯದಲ್ಲಿ ಕಾಣಬಹುದು.

–ಶಶಿರೇಖಾ ನಾಗೇಂದ್ರ, ತುಮಕೂರು

## ಶೇಷಶಯನ ರಂಗನಾಥ

ಕರ್ನಾಟಕದಲ್ಲಿ ವಿಷ್ಣುವನ್ನು ವಿವಿಧ ರೂಪದಲ್ಲಿ ಆರಾಧಿಸುವ ಪರಂಪರೆ ಇದೆ. ಅದರ ಒಂದು ರೂಪವೇ ಶೇಷಶಾಯಿ ರಂಗನಾಥ. ಆ ಸಾಲಿನಲ್ಲಿ ಕಾಣುವ ಅಪರೂಪದ ಮೂರ್ತಿಗಳಲ್ಲಿ ಗೌರಿಬಿದನೂರು ತಾಲ್ಲೂಕಿನ ದಾರಿನಾಯಕನಪಾಳ್ಯದಲ್ಲಿರುವ ಶೇಷಶಯನ ರಂಗನಾಥ ಮೂರ್ತಿಯೂ ಒಂದು. ಶಯನ ಸ್ವರೂಪದಲ್ಲಿರುವ ಈ ಸುಂದರ ಮೂರ್ತಿ ಚತುರ್ಭುಜದಿಂದ ಕೂಡಿದ್ದು, ಪಾದದ ಬಳಿ ಶ್ರೀ ದೇವಿ ಮತ್ತು ಭೂದೇವಿ ಇರುವಂತೆ ಕೆತ್ತಲಾಗಿದೆ. ನಾಭಿಯಿಂದ ಬ್ರಹ್ಮ ಉದಯಿಸುವಂತೆ ಕಾಣುವ ಈ ಮೂರ್ತಿ ಇಲ್ಲಿನ ವೆಂಕಟೇಶ್ವರ ದೇವಾಲಯದ ಆವರಣದಲ್ಲಿದೆ. ಪಾಳೇಗಾರರ ಕಾಲದಲ್ಲಿ ಇದರ ನಿರ್ಮಾಣವಾಗಿದೆ ಎನ್ನಲಾಗುತ್ತದೆ. ಪಕ್ಕದಲ್ಲಿರುವ ದೇವಾಲಯದಲ್ಲಿ ಸುಮಾರು 5 ಅಡಿ ಎತ್ತರದ ಶ್ರೀದೇವಿ ಮತ್ತು ಭೂದೇವಿ ಸಹಿತ ಇರುವ ಸುಂದರ ವೆಂಕಟೇಶ್ವರನ ಮೂರ್ತಿ ಇದೆ. ಈ ದೇವಾಲಯ ಗೌರಿಬಿದನೂರಿನಿಂದ ಸುಮಾರು 12 ಕಿ. ಮೀ. ದೂರದಲ್ಲಿದೆ.

–ಎನ್.ಎಸ್. ಶ್ರೀನಿವಾಸ ಮೂರ್ತಿ, ಬೆಂಗಳೂರು

